ಗಮನ ಸೆಳೆಯುವ ಸೂಚನೆಗಳು

(ಅ) ಆನೇಕಲ್ ಟೌನ್‌ನಲ್ಲಿ ಕುಡಿಯುವ ನೀರಿನ ಅಭಾವದ ಬಗ್ಗೆ :—

ಶ್ರೀ ವೈ. ರಾಮಕೃಷ್ಣ.—ಸನ್ಮಾನ್ಯ ಅಧ್ಯಕ್ಷರೇ, ಆನೇಕಲ್ ಟೌನ್‌ನಲ್ಲಿ ಕುಡಿಯುವ ನೀರಿನ ಅಭಾವದಿಂದಾಗಿ ಜನರಿಗೆ ತೊಂದರೆಯುಂಟಾಗಿರುವ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಈ ಸಂಬಂಧವಾಗಿ ಎರಡು ವಿಷಯಗಳನ್ನು ಕೇಳಲು ಬಯಸುತ್ತೇನೆ.

ಅಧ್ಯಕ್ಷರು.—ಗಮನ ಸೆಳೆಯುವ ಸೂಚನೆಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಮೇಲೆ ನೀವು ಯಾವುದಾದರೂ ಕ್ಲಾರಿಫಿಕೇಷನ್ಸ್ ಇದಕ್ಕೆ ಕೇಳಬಹುದು.

SRI RAMAKRISHNA HEGDE (Chief Minister).—That is the old habit. As a Minister he moves the motion and he will say a few words. Now you should know you have changed the place.

The population of Anekal Town is 19,227 as per 1981 census. The water supply scheme is maintained by the Town Municipal Council, Anekal. The existing water supply scheme for Rs. 8.25 lakhs was sanctioned during 1973 and completed in 1977. It was designed to provide water supply at 10 Gallons Per Capita Day for a population of 23,000 in 1991. The source of water is from Borewells. There are, in all, 10 Borewells which were yielding about 14,000 gallons per hour and with 16 hours of pumping, the per capita rate of water supply was about 10 gallons. Now, with the failure of rains, the yield from these borewells has come down. Added to this, one Borewell near Aldenahally area, which was yielding 3,000 gallons per hour, is silting up frequently and another Borewell yielding 3,500 gallons per hour in Weavers' Colony has collapsed and is abandoned. Pumping Machinery requires repairs in respect of two other borewells. Thus, four out of 10 Borewells, are not in use and the supply from the borewells is considerably reduced. The present supply is only about 6,000 gallons per hour and the rate of water supply is only about 5 GPCD which is very low.

2. An estimate for improvement of water supply to Anekal Town amounting to Rs. 20.50 lakhs has been got up and the same has been administratively approved by Government during December 1982. This scheme is designed for providing water supply to the prospective population of 28,000 estimated during 2001 at the rate of 20 gallons per day. The estimate *Inter alia* provides for sinking of additional 15 borewells as there is no other reliable surface source nearby. The selection of sites for digging borewells has been taken up and the work will be hastened.

3. With a view to provide immediate relief, the borewell yielding 3,000 gallons per hour at Aldenahally area will be desilted

and restored. Also, repairs to the pumping machinery in the case of two borewells will be got done. These measures will improve the rate of water supply from 5 gallons per day to 8 gallons

ಮಾನ್ಯ ಸಭಾಪತಿಗಳೇ, ಆನೇಕಲ್ ಟೌನಿನಲ್ಲಿ ಈಗಾಗಲೇ ನೀರಿನ ಅಭಾವ ಇರತಕ್ಕಂಥಾದ್ದು ನಿಜ. ಅಲ್ಲಿ ನೀರು ಸರಬರಾಯಿ ಯೋಜನೆಯನ್ನು ೧೯೩೩ರಲ್ಲಿ ಮಾಡಲಾಯಿತು. ಆಗ ಅಲ್ಲಿನ ಜನ ಸಂಖ್ಯೆ ೧೯ ಸಾವಿರ ಇತ್ತು. ಈಗ ಜನಸಂಖ್ಯೆಯಲ್ಲಿ ಹೆಚ್ಚಳ ಆಗಿದೆ. ಮತ್ತು ತೆಗೆದಿರುವ ಬೋರ್ ವೆಲ್‌ಗಳು ಕಾರ್ಯನಿರ್ವಹಿಸುವಲ್ಲಿ ವಿಫಲವಾಗಿವೆ. ಅದಕ್ಕಾಗಿ ಒಂದು ಹೊಸ ಯೋಜನೆಯನ್ನು ಮಾಡುತ್ತಿದ್ದೇವೆ. ಇನ್ನೂ ಐದು-ಹತ್ತು ವರ್ಷಗಳವರೆಗೆ ಎಷ್ಟು ಕೆಲಸ ಆಗಬಹುದು ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಕನಿಷ್ಠಪಕ್ಷ ಸರಾಸರಿ ತಲಾ ಎಂಟು ಗ್ಯಾಲನ್ ನೀರು ಒದಗಿಸಬೇಕೆಂಬ ದೃಷ್ಟಿ ಯಿಂದ ಈ ಯೋಜನೆಯನ್ನು ತಯಾರು ಮಾಡಿದ್ದೇವೆ. ತತ್ಕಾಲಕ್ಕೆ ಹೊಸ ಬೋರ್‌ವೆಲ್‌ಗಳನ್ನು ಹಾಕಿಸಿದ್ದೇವೆ. ಒಂದು ಗಂಟೆಗೆ ಮೂರು ಸಾವಿರ ಗ್ಯಾಲನ್ ನೀರು ಇದರಿಂದ ಬರುತ್ತದೆ. ಇದರಿಂದಾಗಿ ಕಂಡಿಯುವ ನೀರಿನ ಸಮಸ್ಯೆ ಸ್ವಲ್ಪಮಟ್ಟಿಗೆ ನಿವಾರಣೆಯಾಗುತ್ತದಾದರೂ ಇದು ಪೂರ್ಣಮಟ್ಟದ ಪರಿಹಾರ ಕಾರ್ಯವಾಗಲಾರದು. ಅಲ್ಲಿ ಯಾವ ಯಾವ ತರಹದ ಕಾರ್ಯಕ್ರಮಗಳನ್ನು ಕೈಗೊಳ್ಳ ಬೇಕಾಗಿದೆಯೋ ಅವುಗಳನ್ನು ತೆಗೆದುಕೊಳ್ಳಲಾಗುತ್ತದೆಯೆಂದು ಮಾನ್ಯ ಸದಸ್ಯರಿಗೆ ಹೇಳಬಯಸು ತ್ತೇನೆ.

ಶ್ರೀ ವೈ. ರಾಮಕೃಷ್ಣ.—ತಮ್ಮ ಹೇಳಿಕೆಯಲ್ಲಿ ೧೦ ಕೊಳವೆ ಬಾವಿಗಳಿವೆ ಎಂದು ಹೇಳಲಾಗಿದೆ. ಆದರೆ ಈ ಬಾವಿಗಳಿಂದ ನೀರು ಬರುತ್ತಿಲ್ಲ. ಕಳೆದ ಸಾರಿ ಮಳೆ ಅಭಾವದಿಂದ ಎಲ್ಲಾ ಬಾವಿಗಳು ಬತ್ತಿ ಹೋಗಿದ್ದು ಅಭಾವ ಪರಿಸ್ಥಿತಿಗೆ ಇದೂ ಕೂಡ ಒಂದು ಕಾರಣವಾಗಿದೆ. ಸರ್ಕಾರದ ವತಿಯಿಂದ ತಾವು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ. ಇದಕ್ಕಾಗಿ ೨೦ ಲಕ್ಷ ರೂಪಾಯಿ ಮಂಜೂರಾತಿ ಮಾಡಿದ್ದೇ ವೆಂದು ಹೇಳಿ ಅದಕ್ಕೆ ಒಂದು ನಿರ್ಬಂಧವನ್ನು ಕೂಡ ಹಾಕಿದ್ದೀರಿ. ಏನೆಂದರೆ ಇಪ್ಪತ್ತು ಲಕ್ಷ ರೂಪಾಯಿಗಳಲ್ಲಿ ಹತ್ತನೇ ಒಂದು ಭಾಗ ಅಂದರೆ ಎರಡು ಲಕ್ಷ ರೂಪಾಯಿಗಳನ್ನು ಈ ಟೌನಿನವರೇ ಕೊಡಬೇಕು ಎಂದು. ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ಇಷ್ಟೆ. ಈ ಒಂದು ನಿಯಮ ವನ್ನು ಹಾಕಿರುವುದರ ದೆಸೆಯಿಂದ ಈ ಟೌನಿನವರಿಗೆ ಎರಡು ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಆಗುವುದಿಲ್ಲ. ಅಲ್ಲಿರತಕ್ಕಂಥ ಜನ ಕೆಳವರ್ಗದವರು, ಹರಿಜನರು, ಮುಸ್ಲಿಮರು, ಮುಂತಾದವರು. ಸಾಹುಕಾರರು ಒಬ್ಬರೂ ಇಲ್ಲ. ಒಂದು ಮಹಡಿ ಮನೆ ಮಾತ್ರ ಇದೆ.

ಒಬ್ಬ ಮಾನ್ಯ ಸದಸ್ಯರು.—ಇದನ್ನೆಲ್ಲಾ ನೀವೇ ಮಾಡಿದ್ದು ಸ್ವಾಮಿ.

ಶ್ರೀ ವೈ. ರಾಮಕೃಷ್ಣ.—೨೦ ಲಕ್ಷ ರೂಪಾಯಿ ಮಂಜೂರು ಮಾಡಿದ್ದೀರಿ. ಆದರೆ ಐವತ್ತು ಪರ್ಸೆಂಟ್‌ನಷ್ಟು ಅಲ್ಲಿ ವೀಕರ್ ಸೆಕ್ಷನ್‌ಗೆ ಸೇರಿದ ಜನರು ಇರುವುದರಿಂದ ಅವರು ಎರಡು ಲಕ್ಷ ರೂಪಾಯಿ ಕೊಡುವುದಕ್ಕೆ ಆಗುವುದಿಲ್ಲ. ರಿಯಾಯಿತಿ ಮಾಡುವುದಕ್ಕೆ ಪ್ರಯತ್ನ ಪಡಿ. ಈ ಒಂದು ಟೌನ್‌ನಲ್ಲಿ ಹೆಚ್ಚಿನ ಜನ ಹಿಂದುಳಿದ ವರ್ಗದವರು ಇದ್ದಾರೆ. ಅಂತಹ ಕಡೆ ಸ್ವಲ್ಪ ರಿಯಾಯಿತಿ ತೋರಿಸಿ.

ಒಬ್ಬ ಮಾನ್ಯ ಸದಸ್ಯರು.—ಈ ಕ್ಷೇತ್ರದಿಂದ ಅವರು ಬಂದಿದ್ದಾರೆ. ಮಂತ್ರಿಗಳೂ ಆಗಿದ್ದವರು. ಅವರು ಮಾಡಬಹುದಾಗಿತ್ತು. ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳು ತ್ತಿದ್ದೇನೆ. ಇವರು ಮಂತ್ರಿಯಾಗಿದ್ದಾಗ ಆನೇಕಲ್‌ನಲ್ಲಿ ಯಾವ ಕೆಲಸವೂ ಆಗಲಿಲ್ಲ. ಈಗಲಾದರೂ ಸರ್ಕಾರದವರು ಆ ಕ್ಷೇತ್ರದ ಜನಗಳಿಗೆ ಅನುಕೂಲ ಮಾಡಿಕೊಡಬೇಕು.

ಶ್ರೀ ಧರ್ಮಸಿಂಗ್.—ಗಮನ ಸೆಳೆಯುವ ಸೂಚನೆಗೆ ಮುಖ್ಯಮಂತ್ರಿಯವರು [illegible] ತ್ತಾರೆ. ಮಧ್ಯದಲ್ಲಿ ಸದಸ್ಯರು ಈ ರೀತಿಯಾಗಿ ಉತ್ತರ ಕೊಡುವುದಕ್ಕೆ ಅವಕಾಶ [illegible] ಸ್ವಾಮಿ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಮುಖ್ಯಮಂತ್ರಿ[illegible] ಏನು ಉತ್ತರ ಕೊಡುತ್ತಾರೋ ಮೊದಲು ಕೇಳೋಣ. ನಮ್ಮನ್ನು [illegible] ಬರುತ್ತವೆ.

ಅಧ್ಯಕ್ಷರು.—ಕೆಲವು ದಿವಸ ಅದು ಹಾಗೆ ಇರುತ್ತದೆ.

ಶ್ರೀ ವೈ. ರಾಮಕೃಷ್ಣ.—ಅದಕ್ಕೋಸ್ಕರವೇ ದಯವಿಟ್ಟು ನಾವು ಏಸು ಹೇಳುತ್ತೇವೆ. ಅದನ್ನು ಸ್ವಲ್ಪ ಗಮನಕೊಟ್ಟು ಕೇಳಬೇಕೆಂದು ಕೇಳುತ್ತೇನೆ.

ಶ್ರೀ ಜೀವರಾಜ ಆಳ್ವ.—ಸರಿಯಾದ ಸಮಯದಲ್ಲಿ, ಸರಿಯಾದ ಜಾಗದಲ್ಲಿ ತಾವು ಇಲ್ಲವೆಂದು ಅವರಿಗೆ ಅನ್ನಿಸುತ್ತಿರಬಹುದು.

ಶ್ರೀ ವೈ. ರಾಮಕೃಷ್ಣ.—ಇದರಲ್ಲಿ ತಪ್ಪೇನಿದೆ ಸ್ವಾಮಿ ? ಈಗ ನಾನು ಹೇಳುತ್ತಾ ಇರತಕ್ಕಂಥಾದ್ದು ಆನೇಕಲ್ ವಿಚಾರ ಒಂದೇ ಅಲ್ಲ, ಬೆಂಗಳೂರು ಜಿಲ್ಲೆಯಲ್ಲಿರತಕ್ಕ ಎಲ್ಲಾ ನಗರಗಳಲ್ಲೂ, ಹೊಸಕೋಟೆಯಲ್ಲೂ ಅದೇ ರೀತಿ ಪರಿಸ್ಥಿತಿ ಬಂದಿದೆ ಎಂದು ಹೇಳುತ್ತೇನೆ. ಒಂದು ವೇಳೆ ಗ್ರ್ಯಾಂಟ್ ಕೊಡಲಿಕ್ಕೆ ಆಗುವುದಿಲ್ಲವೆಂದು ತಮ್ಮ ಸಂಪುಟ ನಿರ್ಧಾರ ತೆಗೆದುಕೊಳ್ಳುವುದಾದರೆ ಸಾಲವನ್ನಾದರೂ ಕೊಡಿ. ಮುನಿಸಿಪಾಲಿಟಿಗೆ ಹತ್ತನೇ ಒಂದು ಭಾಗವಾದರೂ ಕೊಡಲಿಕ್ಕೆ ಆಗುವುದಿಲ್ಲ. ಈಗ ತಾವೇನು ಮಂಜೂರಾತಿ ಕೊಟ್ಟಿದ್ದೀರಿ ಅದನ್ನು ಸಾಲದ ರೂಪದಲ್ಲಾದರೂ ಕೊಟ್ಟು ಕೆಲಸವನ್ನು ಮುಗಿಸಿಕೊಡಿ. ಇಲ್ಲದೇ ಹೋದರೆ ಜನಗಳು ಟೌನನ್ನು ಬಿಡಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ಈ ವಿಚಾರವನ್ನು ಪರಿಶೀಲನೆ ಮಾಡಿ ನಿಮ್ಮಿಂದ ಗ್ರ್ಯಾಂಟ್ ಕೊಡಲಿಕ್ಕೆ ಸಾಧ್ಯವಿಲ್ಲವೆನ್ನುವುದಾದರೆ ಸಾಲದ ರೂಪದಲ್ಲಾದರೂ ಎರಡು ಲಕ್ಷ ರೂಪಾಯಿಗಳಿಗೆ ಮಂಜೂರಾತಿ ಕೊಟ್ಟು ಸುಲಭ ಕಂತಿನಲ್ಲಿ ವಸೂಲು ಮಾಡುವುದಕ್ಕೆ ಅನುಕೂಲ ಮಾಡಿಕೊಡಿ.

ಶ್ರೀ ಎನ್. ಚಿಕ್ಕೇಗೌಡ.—ಹೊಸಕೋಟೆಯಲ್ಲೂ ಕೂಡ ಪರಿಸ್ಥಿತಿ ಇದೇ ರೀತಿ ಇದೆ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಹೆಚ್. ಜಿ. ಚನ್ನಪ್ಪ.—ಮಾಗಡಿಯಲ್ಲೂ ಇದೇ ಪರಿಸ್ಥಿತಿ ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಈ ಪರಿಸ್ಥಿತಿ ಮಾಗಡಿಯಲ್ಲಿ ಇರಬಹುದು, ಚನ್ನಪಟ್ಟಣದಲ್ಲಿ ಇರಬಹುದು, ಎಲ್ಲಾ ಕಡೆ ಇರಬಹುದು, ಅದನ್ನು ಪ್ರತ್ಯೇಕವಾಗಿ ತೆಗೆದುಕೊಂಡು ಬನ್ನಿ ಅಷ್ಟೆ. ೨೦ ಲಕ್ಷ ರೂಪಾಯಿಗಳನ್ನು ನಾವು ಹೊಸದಾಗಿ ಬಂದ ಮೇಲೆ ಮಂಜೂರಾತಿ ಮಾಡಿದ್ದೇವೆ ಎಂದು ನಾನು ಹೇಳಲಿಲ್ಲ. ಚುನಾವಣೆ ೧೫ ದಿವಸ ಇದ್ದಾಗಲೇ ಮಂಜೂರಾತಿ ಕೊಡಿಸಿದ್ದಾರೆ.

ಶ್ರೀ ವೈ. ರಾಮಕೃಷ್ಣ.—ಚುನಾವಣೆಗೆ ಮುಂಚೆ ಅಲ್ಲ, ಶಿವಮೊಗ್ಗದಲ್ಲಿ ನಡೆದ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ತೀರ್ಮಾನವಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಆ ಹೊತ್ತಿನಲ್ಲಿ ಈ ರೀತಿಯಾಗಿ ಅಬಲ ನಗರ ಪಾಲಿಕೆಗಳಲ್ಲಿ ಹಾಗೂ ಎಲ್ಲೆಲ್ಲಿ ಹಿಂದುಳಿದ ವರ್ಗದವರು, ಪರಿಶಿಷ್ಟ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎನ್ನುವುದನ್ನು ಈಗ ಹೇಳುವವರಿಗೆ ಆಗ ತಲೆಯಲ್ಲಿ ಬಂದು ಮಾಡಿಕೊಂಡಿದ್ದರೆ ಮತ್ತೂ ಚೆನ್ನಾಗಿತ್ತು. ಅದಕ್ಕೆ ಸೈದ್ಧಾಂತಿಕ ದೃಷ್ಟಿಯಿಂದ ಆಕ್ಷೇಪಣೆ ಇಲ್ಲ. ಈ ರೀತಿ ಅಭಾವ ಎಷ್ಟೋ ಕಡೆ ತಲೆದೋರಿದೆ. ಆನೇಕಲ್ ಶಹರ ಒಂದೇ ಅಲ್ಲ, ಅನೇಕ ಶಹರಗಳಲ್ಲಿ ನೀರಿನ ಅಭಾವವಿದೆ. ಆದ್ದರಿಂದ ಅವರು ಹೇಳಿದಂಥ ಸೂಚನೆಯನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಮುಖ್ಯ ಮಂತ್ರಿಗಳು ಚುನಾವಣೆ ೧೫ ದಿವಸ ಇದ್ದಾಗ ಮಂಜೂರಾತಿ ಕೊಡಿಸಿದ್ದಾರೆಂದು ಹೇಳಿದರು. ಚುನಾವಣೆಗೆ ಮುಂಚೆ ಅಲ್ಲ, ಒಂದು ವರ್ಷದ ಹಿಂದೆ ಶಿವಮೊಗ್ಗದಲ್ಲಿ ನಡೆದ ಸಂಪುಟದ ಸಭೆಯಲ್ಲಿ ತೀರ್ಮಾನವಾಗಿದೆ, ತಾವು ಮುಖ್ಯ ಮಂತ್ರಿಗಳಿದ್ದೀರಿ, ತರಿಸಿ ನೋಡಬಹುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ಪ್ರಶ್ನೆ ಇರುವುದು ಬರೀ ಶಹರಗಳಲ್ಲಿ ಮಾತ್ರವಲ್ಲ ಪ್ರತಿಯೊಂದು ಹಳ್ಳಿಹಳ್ಳಿಯಲ್ಲೂ ಇದೆ. ನಾವು ಎಲ್ಲಿಗೆ ಹೋದರೂ 'ನಮಗೆ ಏನೂ ಬೇಡ, ನೀರು ಕುಡಿಸಿ' ಎಂದು ಜನರು ಹೇಳುತ್ತಾರೆ. ಕುಡಿಯುವ ನೀರಿನ ಅಭಾವ ಆನೇಕಲ್ ಶಹರದಲ್ಲಿ ಮಾತ್ರವಲ್ಲ, ಇತರೆ ಶಹರಗಳಲ್ಲಿ ಮಾತ್ರವಲ್ಲ, ಪ್ರತಿ ಹಳ್ಳಿಯಲ್ಲೂ ಇದೆ. ನಮಗೆ ಸ್ವಾತಂತ್ರ್ಯ ಬಂದು ೩೫ ವರ್ಷಗಳಾಗಿದೆ, ಆದರೂ ಜನಗಳಿಗೆ ಕುಡಿಯುವ ನೀರನ್ನು ಕೊಡುವುದಕ್ಕೆ ಶಕ್ಯವಾಗಿಲ್ಲ, ಇದು ನಾಚಿಕೆಗೇಡಾಗಿದೆ. ಆದ್ದರಿಂದ ತಾವು ಈ ತವಕವನ್ನು ತಪ್ಪಿಸಲು ದಯಮಾಡಿ ಮನಸ್ಸು ಕೊಡಿ.

ಒಬ್ಬ ಮಾನ್ಯ ಸದಸ್ಯರು.—ಹಿಂದಿನ ಸರ್ಕಾರದವರು ಪ್ರತಿ ಹಳ್ಳಿಯನ್ನೂ ಈ ಸ್ಥಿತಿಗೆ ತಂದಿಟ್ಟಿದ್ದಾರೆ. ಬಹಳ ಕಡೆ ಕುಡಿಯುವುದಕ್ಕೆ ನೀರಿಲ್ಲ, ತಿನ್ನುವುದಕ್ಕೆ ಅನ್ನವಿಲ್ಲ. ಅದನ್ನು ಸುಧಾರಣೆ ಮಾಡುವುದಕ್ಕೆ ಈಗಿನ ಮುಖ್ಯ ಮಂತ್ರಿಗಳು ಅದಷ್ಟು ಜಾಗ್ರತೆ ಗಮನಕೊಡಬೇಕು.

ಅಧ್ಯಕ್ಷರು.—ಅವರಿಗೆ ಗೊತ್ತಾಗಿದೆ, ನೀವೇಕೆ ಹೇಳುತ್ತಿದ್ದೀರಿ.

ಶ್ರೀ ಬಿ. ಬೈರಪ್ಪಾಜಿ.—ಈ ಸ್ಥಿತಿಗೆ ತಂದಿಟ್ಟಿದ್ದಾರೆ, ಕುಡಿಯುವುದಕ್ಕೆ ನೀರಿಲ್ಲ, ತಿನ್ನುವುದಕ್ಕೆ ಅನ್ನವಿಲ್ಲವೆಂದು ಅವರು ಹೇಳುತ್ತಿದ್ದಾರೆ. ಈ ರೀತಿ ಹೇಳಿದರೆ ವಿರೋಧಪಕ್ಷ ಹೇಗೆ ಕೆಲಸ ಮಾಡಬೇಕು ಎಂದು ತಾವೇ ಹೇಳಿ ? ಆ ಕಡೆ ಪ್ರತಿಯೊಬ್ಬರೂ ಕೂಡ ಈ ರೀತಿ ಹೇಳುವುದಾದರೆ ವಿರೋಧ ಪಕ್ಷ ಹೇಗೆ ಕೆಲಸ ಮಾಡಬೇಕು ?

ಅಧ್ಯಕ್ಷರು.—ತಾವು ಉಪದೇಶಕ್ಕೆ ಬೇರೆ ಸಮಯ ಇಟ್ಟುಕೊಳ್ಳಿ.

ಶ್ರೀ ಬಿ. ಬೈರಪ್ಪಾಜಿ.—ಈ ರೀತಿ ಎಲ್ಲಾ ಕಡೆ ಕ್ಷಾಮ ಬಂದಿದೆ, ಮಳೆ ಇಲ್ಲ, ಬೆಳೆಯಾಗಿಲ್ಲ, ರೈತರು ತೊಂದರೆಯಲ್ಲಿದ್ದಾರೆ. ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಹೇಳಿದಂತೆ ಎಲ್ಲಾ ಕಡೆ ಈ ಪರಿಸ್ಥಿತಿ ಇದೆ, ಇಡೀ ದೇಶದಲ್ಲೇ ತೊಂದರೆಯಿದೆ. ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಜನಗಳಿಗೆ ಕುಡಿಯುವ ನೀರನ್ನು ಒದಗಿಸತಕ್ಕಂಥ ಮತ್ತು ದನಗಳಿಗೆ ಮೇವನ್ನು ಒದಗಿಸತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು.

ಒಬ್ಬ ಮಾನ್ಯ ಸದಸ್ಯರು.—ಹಿಂದೆ ಶ್ರೀಮಾನ್ ಬೇಗಾನೆ ರಾಮಯ್ಯನವರು ಮಂತ್ರಿಗಳಾಗಿದ್ದರು, ಏನು ಮಾಡಿದರು, ಈಗ ನಾವು ಬಂದಿದ್ದೇವೆ, ಖಂಡಿತ ಮಾಡುತ್ತೇವೆ, ನಮ್ಮ ನಾಯಕರಿದ್ದಾರೆ, ಮಾಡುತ್ತಾರೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.—ಜನ ನೀರು ಕೇಳಿದರೆ ಇವರು ರಾಜಕಾರಣ ಮಾಡುತ್ತಿದ್ದಾರೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ಬಗ್ಗೆ ಈ ಸದನದ ಕಳಕಳಿ ನನಗೆ ಅರ್ಥವಾಗುತ್ತಾ ಇದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನೀರಿನ ವಿಚಾರ ಮಾತನಾಡುತ್ತಿದ್ದೇವೆ, ನೀರಿನ ವಿಚಾರ ಮಾತನಾಡುವಾಗ ರಾಜಕಾರಣ ಮಾಡಿದರೆ ನಾವು ಕೇಳುವುದಿಲ್ಲ, ನಿಮಗೆ ಶಕ್ತಿಯಿಲ್ಲ ಎಂದು ಕುಳಿತುಕೊಳ್ಳುತ್ತೇವೆ.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಸದಸ್ಯೆಯಾದ ಶ್ರೀಮತಿ ನಾಗರತ್ನಮ್ಮನವರು ರಾಜ್ಯದಲ್ಲಿ ಮಳೆಯಿಲ್ಲದೆ ನೀರಿಗೆ ಅಭಾವವಿದೆ, ಎಂದು ಹೇಳಿದರು. ಈಗ ಬೇಸಗೆ ಪ್ರಾರಂಭವಾಗಿ ಹಳ್ಳಿಗಳಲ್ಲೂ ಕುಡಿಯುವುದಕ್ಕೆ ನೀರು ಇಲ್ಲ, ಮಳೆರಾಯನ ಕೃಪೆಯಿಲ್ಲದೆ ಬೆಳೆಯೆಲ್ಲಾ ಹೋಗಿದೆ. ಅದಕ್ಕೆ ಕಾಂಗ್ರೆಸ್-ಐ ಕಾರಣಕರ್ತರು ಎಂದು ಹೇಳಿ ಪ್ರತಿಯೊಂದಕ್ಕೂ ನಮ್ಮನ್ನು ತೋರಿಸಿಕೊಂಡು ಹೋದರೆ ಹೇಗೆ ? ನೀರು ಕೊಡಿ ಎಂದು ಕೇಳಿದರೆ ನಮ್ಮ ಕಡೆ ತೋರಿಸಿಕೊಂಡು ಹೋಗುವುದಾದರೆ ಇದರಲ್ಲಿ ನಮ್ಮ ಸಹಕಾರವಿರುವುದಿಲ್ಲ, ದಯವಿಟ್ಟು ತಿಳಿದುಕೊಳ್ಳಿ.

ಶ್ರೀ ಧರ್ಮಸಿಂಗ್.—೫ ವರ್ಷಗಳ ಅವಧಿಯಲ್ಲಿ ಸರ್ಕಾರ ಏನು ಕೆಲಸಕಾರ್ಯಗಳನ್ನು ಮಾಡಿದೆ ಎನ್ನುವುದು ಚುನಾವಣೆಯಲ್ಲಿ ಪ್ರಸ್ತಾಪವಾಗಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಪ್ರವಾಸ ಮಾಡಿದಾಗ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದು ಗೊತ್ತಾಗುತ್ತದೆ.

ಶ್ರೀ ಎನ್. ಚಿಕ್ಕೇಗೌಡ.—ನೀವು ತಪ್ಪಿಸುವುದಕ್ಕೆ ಸಾಧ್ಯವಿಲ್ಲ, ನಾವು ಮಾಡಿದ್ದೇವೆ, ಗೊತ್ತಿದೆ, ನೀವು ದಯವಿಟ್ಟು ಕುಚೇಷ್ಟೆ ಮಾಡಬೇಡಿ.

(ಗೊಂದಲ)

ಅಧ್ಯಕ್ಷರು.—ದಯಮಾಡಿ ಮೊದಲು ಸಂಪ್ರದಾಯವನ್ನು ತಿಳಿದುಕೊಳ್ಳೋಣ. ಈಗ ನಿಮ್ಮ ಪರ ಮತ್ತು ಪೂರಕವಾಗಿ ಚರ್ಚೆ ಮಾಡುವುದಕ್ಕೆ ಮುಂದೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವುದಿದೆ, ಆಗ ಸಾಕಷ್ಟು ಚರ್ಚೆ ಮಾಡೋಣ. ಈಗ ನೀರಿನ ವಿಚಾರ ಏನಿದೆ ಅದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೋ ಕೇಳೋಣ.

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ಯ ಮಂತ್ರಿ)– ಮೊದಲನೆಯದಾಗಿ ನನಗೆ ಆನಂದವಾಗುತ್ತಿದೆ. ಏಕೆಂದರೆ, ಎಲ್ಲಾ ಜನರು ಹಳ್ಳಿಗಾಡಿನ ಕುಡಿಯುವ ನೀರಿನ ಬಗ್ಗೆ, ಅದರ ಆದ್ಯತೆಯ ಬಗ್ಗೆ ಮಾತನಾಡುತ್ತಿದ್ದಾರೆ. ನಮ್ಮ ಸರ್ಕಾರ ಬಂದ ತಕ್ಷಣ ಈ ಬಗ್ಗೆ ನಾನು ವರದಿಯನ್ನು ತರಿಸಿದೆ. ಈಗಾಗಲೇ ೧೮೬೦ ಹಳ್ಳಿಗಳಲ್ಲಿ ನೀರು ವಿತರಣೆಯಾಗುತ್ತಾ ಇದೆ, ಮನೆಗಳಲ್ಲಿ ಹೆಣ್ಣುಮಕ್ಕಳು ಬೆಳಿಗ್ಗೆ ತಂದ ನೀರನ್ನು ಹಂಚಿಕೊಳ್ಳತಕ್ಕ ಪರಿಸ್ಥಿತಿ ಇದೆ. ಈ ವಿಷಯವನ್ನು ನಾವು ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಪ್ರಸ್ತಾಪಮಾಡಿ, ಇದಕ್ಕೆ ೬೬೦ ಲಕ್ಷ ರೂಪಾಯಿಗಳು ಬೇಕು, ಎಲ್ಲಿ ನೀರು ಪೂರ್ಣವಾಗಿ ಇಲ್ಲ ಅಂಥಾ ಹಳ್ಳಿಗಳಲ್ಲಿ ನೀರನ್ನು ಕೊಡಬೇಕು ಎಂದು ಮಂಜೂರಾತಿ ಮಾಡಿದೆ. ಈ ಪಿ.ಹೆಚ್.ಇ. ಡಿಪಾರ್ಟ್‌ಮೆಂಟ್ ನೆಗ್ಲೆಕ್ಟೆಡ್ ಡಿಪಾರ್ಟ್‌ಮೆಂಟಾಗಿದೆ. ಇವತ್ತು ಅದರಲ್ಲಿ ೬೨ ಅಸಿಸ್ಟೆಂಟ್ ಇಂಜಿನಿಯರ್ಸ್ ಇಲ್ಲ, ಜಿ.ಎಫ್. ರಿಜಿಸ್ಟರ್ ಇಲ್ಲ. ಆದುದರಿಂದ ನಮ್ಮ ಸಹೋದ್ಯೋಗಿ ಮಂತ್ರಿಗಳೂ ಕುಳಿತುಕೊಂಡು ಈ ಡಿಪಾರ್ಟ್‌ಮೆಂಟಿನಲ್ಲಿ ಇಂಜಿನಿಯರ್ಸ್‌ನ್ನು ಪಡೆದಿದ್ದೇವೆ.

ನಿಮಗೆ ಈ ಮೂಲಕ ಭರವಸೆ ಕೊಡುತ್ತಿದ್ದೇನೆ, ನಮ್ಮ ಇಲಾಖೆಯವರಿಗೆ ಈ ಕುಡಿಯುವ ನೀರಿನ ಬಗ್ಗೆ ಯುದ್ಧದೋಪಾದಿಯಲ್ಲಿ ಕೆಲಸ ಮಾಡಬೇಕೆಂದು ತಿಳಿಸಿ, ಇದಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು ಎನ್ನುವ ದೃಷ್ಟಿಯಿಂದ ನಾವು ಸಹ ಮಾಡುತ್ತಿದ್ದೇವೆ. ಎಲ್ಲರಿಗೂ ಕುಡಿಯುವ ನೀರು ಸಿಕ್ಕಬೇಕು ಆದರೆ ಕಳೆದ ೩೫ ವರ್ಷಗಳಿಂದ ಹಳ್ಳಿಗಾಡಿನ ಜನರಿಗೆ ಕುಡಿಯಲು ನೀರು ಸಹ ಸಿಕ್ಕಿಲ್ಲ. ಆದುದರಿಂದ ಇದರ ಬಗ್ಗೆ ನಾನು ಹೇಳುತ್ತಿದ್ದೇನೆಯೋ ಹೊರತು ರಾಜಕಾರಣ ಮಾಡಿ ಮಾತಾಡಬೇಕೆಂದು ಏನೂ ಇಲ್ಲ. ವಿರೋಧ ಪಕ್ಷದ ನಾಯಕರವರು ಹೇಳಿದರು ಇದು ಮೂಲಭೂತವಾದ ಪ್ರಶ್ನೆ, ಇದಕ್ಕೆ ಆದ್ಯತೆ ಕೊಡಬೇಕೆಂದು ಹೇಳಿದರು, ಆದರೆ ನಾವು ಈಗಾಗಲೇ ಇದರ ಬಗ್ಗೆ ಸಚಿವ ಸಂಪುಟದಲ್ಲಿಯೂ ಸಹ ಇದಕ್ಕೆ ಆದ್ಯತೆ ಕೊಟ್ಟು ೧೮೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಕುಡಿಯಲು ನೀರಿಗೆ ಹಣವನ್ನು ಖರ್ಚು ಮಾಡಲು ಇಲ್ಲದೇ ಇರುವಾಗ ಏಷಿಯಾಡ್‌ಗೆ ೧೫೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಅವಶ್ಯಕತೆ ಇತ್ತೇ ಎನ್ನುವುದನ್ನು ಮಾನ್ಯ ಸದಸ್ಯರು ತಿಳಿದು ಕೊಳ್ಳಬೇಕು. ಆದ್ಯತೆ ಪ್ರಶ್ನೆ ಬಂದಾಗ ಈ ಮಾತನ್ನು ಹೇಳಬೇಕಾಗುತ್ತದೆ.

ಶ್ರೀ ಧರ್ಮಸಿಂಗ್.—ಆನೇಕಲ್‌ನಲ್ಲಿ ಕುಡಿಯುವ ನೀರಿನ ತೊಂದರೆ ಇದೆ, ಅದರ ಬಗ್ಗೆ ತಮ್ಮ ನಿಲುವು ಏನಿದೆ ಎಂಬುದನ್ನು ಮಾನ್ಯ ಮಂತ್ರಿಗಳವರು ಸ್ಪಷ್ಟಪಡಿಸುತ್ತಿಲ್ಲ.

(ಗೊಂದಲ)

ಶ್ರೀ ಎನ್. ಚಿಕ್ಕೇಗೌಡ.—ಏಷಿಯಾಡ್‌ಗೂ ಇದಕ್ಕೂ ಏನು ಸಂಬಂಧ ?

ಶ್ರೀ ಅಬ್ದುಲ್ ನಜೀರ್ ಸಾಬ್ -ಅದಕ್ಕೂ ಇದಕ್ಕೂ ಸಂಬಂಧವಿದೆ, ನಿಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

(ಗೊಂದಲ)

SRI M. VEERAPPA MOILY.—You are not a child to talk like this.

SRI ABDUL NAZIR SAB.—I will tell you everything in detail. ನಾನು ಹೇಳುವುದಕ್ಕೆ ತಾವು ಸ್ವಲ್ಪ ದಯಮಾಡಿ ಕೇಳಿ.

(ಗೊಂದಲ)

MR. SPEAKER.—There are certain set of rules which we have to follow. ಒಬ್ಬೊಬ್ಬರಾಗಿ ಮಾತನಾಡಿ, ಈ ರೀತಿ ಎಲ್ಲರೂ ಒಟ್ಟಿಗೆ ಮಾತನಾಡುವುದು ಸರಿಯಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಇದಕ್ಕೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳವರು ಎದ್ದುನಿಂತು ಕೊಂಡು ಮಾತನಾಡುತ್ತಿರುವಾಗ ಈ ರೀತಿ ಮಧ್ಯೆ ಮಧ್ಯೆ ಮಾತನಾಡುವುದು ಸರಿಯಲ್ಲ.

ಶ್ರೀ ಎನ್. ಚಿಕ್ಕೇಗೌಡ.—ಏನು ಹೇಳುತ್ತಿದ್ದಾರೆ ?

ಶ್ರೀ ಧರ್ಮಸಿಂಗ್.—ಏನೇನೋ ಹೇಳುತ್ತಿದ್ದಾರೆ, ಅದಕ್ಕೂ ಇದಕ್ಕೂ ಸಂಬಂಧವೇ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಶ್ರೀ ಧರ್ಮಸಿಂಗ್‌ರವರು ಸ್ವಲ್ಪ ಸಹನೆ ಇಟ್ಟುಕೊಳ್ಳಬೇಕು. ಅವರು ಅಲ್ಲಿ ಇದ್ದಾಗ ಬಹಳ ಸಹನೆಯಿಂದ ಇದ್ದರು, ಇಲ್ಲಿಗೆ ಬಂದಮೇಲೆ ಅವರಿಗೆ ಸಹನೆ ಹೋಗಿ

ಬಿಟ್ಟಿದೆ. ಮಾನ್ಯ ಶ್ರೀ ಚಿಕ್ಕೇಗೌಡರವರು ಕೂಡ ಹಿಂದೆ ಮಂತ್ರಿಯಾಗಿದ್ದವರು, ಮಂತ್ರಿಗಳವರು ಉತ್ತರ ಕೊಡುತ್ತಿದ್ದಾಗ ಮಧ್ಯೆ ಮಧ್ಯೆ ಎದ್ದುನಿಂತುಕೊಂಡು ಕೇಳುತ್ತಿದ್ದರೆ ಅವರು ಹೇಗೆ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆ ? ನೀವು ಇಲ್ಲಿಯವರೆಗೆ ನೀರಿನ ಬಗ್ಗೆ ಟೀಕೆ ಮಾಡಿ ಹೇಳಿದ್ದೀರಿ ಅದಕ್ಕೆ ಅವರೇನು ಹೇಳುತ್ತಾರೆಂಬುದರ ಬಗ್ಗೆ ಸಹನೆಯಿಂದ ಕೇಳಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಏಷಿಯಾಡ್‌ಗೂ ಆನೇಕಲ್‌ನ ನೀರಿಗೂ ಏನು ಸಂಬಂಧ ?

(ಗೊಂದಲ)

ಶ್ರೀ ಅಬ್ದುಲ್ ನಜೀರ್ ಸಾಬ್.—ನಾನು ಆನೇಕಲ್‌ನ ವಿಷಯದ ಬಗ್ಗೆ ಪ್ರಸ್ತಾಪ ಮಾಡಿಯೇ ಹೇಳುತ್ತಿದ್ದೆ. ನಾವು ಸಹ ಹಳ್ಳಿಗಾಡಿನಿಂದ ಬಂದಿರತಕ್ಕವರು, ಹಳ್ಳಿಗಳ ಅಭಿವೃದ್ಧಿ ಬಗ್ಗೆ ಯೋಜನೆ ಮಾಡುತ್ತಿದ್ದೇವೆ. ೨೦ ಸಾವಿರ ಹಳ್ಳಿಗಳು ಪ್ರಾಬ್ಲಮ್ಯಾಟಿಕ್ ವಿಲೇಜ್‌ಗಳೆಂದು ಗುರುತು ಮಾಡಿದ್ದೇವೆ. ೧೩ ಸಹಸ್ರ ಹ್ಯಾಮ್ಲೆಟ್ಸ್‌ಗೆ ನೀರನ್ನು ಕೊಡಬೇಕಾಗಿದೆ ಅದಕ್ಕಾಗಿ ನಾವು ೬ನೇ ಯೋಜನೆಯೊಳಗಾಗಿ ಕೊಡಬೇಕೆಂದು ಯೋಜನೆ ಮಾಡಿದ್ದೇವೆ. ಇದಕ್ಕೆಲ್ಲಾ ಸಂಪನ್ಮೂಲಗಳನ್ನು ಒದಗಿಸಿಕೊಳ್ಳುವ ಬಗ್ಗೆ ನಾವು ವಿಚಾರ ಮಾಡಬೇಕಾಗಿದೆ. ಇದಕ್ಕೆ ಹೆಚ್ಚಿನ ಹಣವನ್ನು ಒದಗಿಸುವ ಬಗ್ಗೆ ನಮ್ಮ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ಬೀರಬೇಕಾಗಿದೆ. ಏತಕ್ಕೆಂದರೆ ಕೇಂದ್ರ ಸರ್ಕಾರದವರೇ ಇದಕ್ಕೆಲ್ಲಾ ಹಣವನ್ನು ಒದಗಿಸಬೇಕಾಗಿರತಕ್ಕವರು, ಇದು ಅವರ ಕರ್ತವ್ಯ ಕೂಡ ಆಗಿದೆ. ಆ ದೃಷ್ಟಿಯಿಂದ ಇವತ್ತು ಕೇಂದ್ರ ಸರ್ಕಾರದವರು ಇದರ ಕಡೆಗೆ ಆದ್ಯತೆ ಕೊಟ್ಟು ಹಳ್ಳಿಗಾಡಿನ ಬಗ್ಗೆ ವಿಚಾರ ಮಾಡಬೇಕಾಗಿದೆ. ಆದುದರಿಂದ ಕುಡಿಯುವ ನೀರಿನ ಬಗ್ಗೆ ನಿಮಗೆ ಏನು ಕಳಕಳಿ ಇದೆಯೆಂದು ಹೇಳುತ್ತಿದ್ದೀರಿ, ಇದರ ಬಗ್ಗೆ ಈ ದೇಶದಲ್ಲಿ ಚಳುವಳಿಯಾಗಲಿ...

ಶ್ರೀ ಎಂ. ವೀರಪ್ಪ ಮೊಯ್ಲಿ.—ಕೇಂದ್ರ ಸರ್ಕಾರದ ಬಗ್ಗೆ ಏತಕ್ಕೆ ನೀವು ಕೈ ಎತ್ತಿ ತೋರಿಸುತ್ತೀರಿ ? ನಿಮ್ಮ ಕೈಯಿಂದ ಇದನ್ನು ಮಾಡಲು ಆಗದಿದ್ದರೆ ಬಳೆ ತೊಟ್ಟುಕೊಂಡು, ಸೀರೆ ಉಟ್ಟುಕೊಂಡು ಮನೆಗೆ ಹೋಗಿ, ಕೇಂದ್ರ ಸರ್ಕಾರದ ಮೇಲೆ ಏತಕ್ಕೆ ಕೈ ಎತ್ತಿ ತೋರಿಸುತ್ತೀರಿ ?

SRI ABDUL NAZIR SAB.—Why did the Leader of the Opposition get excited? He is also a Senior Member.

(ಗೊಂದಲ)

MR. SPEAKER.—Please resume your seats. The matter is closed and I have called Sri Shanthamurthy to raise his matter.

(Interruptions)

ಶ್ರೀ ಅಬ್ದುಲ್ ನಜೀರ್ ಸಾಬ್.—ಏಷಿಯಾಡ್‌ಗೆ ಆದ್ಯತೆ ಕೊಟ್ಟಿರುವಾಗ, ಕುಡಿಯುವ ನೀರಿನ ಬಗ್ಗೆ ಏತಕ್ಕೆ ಕೇಂದ್ರ ಸರ್ಕಾರದವರು ಆದ್ಯತೆ ಕೊಡಲಿಲ್ಲ ? ಟಿ.ವಿ.ಗೆ ಆದ್ಯತೆ ಕೊಡಬೇಕಾಗಿತ್ತೆ ?

ಶ್ರೀ ಧರ್ಮಸಿಂಗ್.—ರಾಜಕಾರಣ ಮಾಡುವುದು ಸರಿಯಲ್ಲ, ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ಏನು ಮಾಡುತ್ತೀರಿ ಎಂಬುದನ್ನು ಹೇಳಿ.

(ಗೊಂದಲ)

MR. SPEAKER.—I request the Hon'ble Members not to have side talks and when the Hon'ble Minister is speaking, I request you not to interfere.

ಶ್ರೀ ಎಚ್. ಡಿ. ದೇವೇಗೌಡ.—ಈಗತಾನೇ ಚುನಾವಣೆಯನ್ನು ಮುಗಿಸಿಕೊಂಡು ಬಂದಿದ್ದೇವೆ. ನಾವು ಅಧಿಕಾರ ವಹಿಸಿಕೊಂಡು ೧೫ ದಿವಸ ಕೂಡ ಆಗಿಲ್ಲ ಆದುದರಿಂದ ನಮಗೂ ಸ್ವಲ್ಪ ಕಾಲಾವಕಾಶ ವಹ್ನು ಕೊಡಿ. ಅಧ್ಯಕ್ಷರೇ, ನಾನು ಸಾಮಾನ್ಯವಾಗಿ ವಿರೋಧ ಪಕ್ಷದ ಸ್ಥಾನದಲ್ಲಿ ಕೂತು ಕೆಲಸ ಮಾಡಿರುವುದರಿಂದ ನಾವು ಕೊಡುವುದಕ್ಕೆ ಮತ್ತು ತೆಗೆದುಕೊಳ್ಳುವುದಕ್ಕೆ ಎರಡಕ್ಕೂ ಸಿದ್ಧವಾಗಿರ ಬೇಕಾಗಿರುತ್ತದೆ. ನಾನು ೧೯೭೮ರಲ್ಲಿ ಈ ಸದನಕ್ಕೆ ಬಂದಾಗ ವಿರೋಧ ಪಕ್ಷದ ಮುಖಂಡನಾಗಿ ಅಧಿಕಾರ ವಹಿಸಿಕೊಂಡಾಗ ಶ್ರೀಮತಿ ನಾಗರತ್ನಮ್ಮನವರು ಅಧ್ಯಕ್ಷರಾಗಿದ್ದರು ಮತ್ತು ಶ್ರೀ ಕೆ. ಎಚ್. ರಂಗನಾಥ್‌ರವರು ಸಹ ಇವತ್ತು ಆ ಕಡೆ ಕುಳಿತಿದ್ದಾರೆ ನಾನು ಹಿಂದೆ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಪ್ರಯತ್ನ ಮಾಡಿದಾಗ ಪ್ರತಿಯೊಂದು ಹಂತದಲ್ಲೂ ನಮ್ಮ ಹಿಂದಿನ ಸರ್ಕಾರ ಇದಕ್ಕೆ ಕಾರಣ ಎಂದು ಹೇಳುವಂಥಾ ಟೀಕೆಯನ್ನು ನಾನು ಅವರಿಂದ ಕೇಳುತ್ತಿದ್ದೆ. ಆದರೆ ಇವತ್ತು ನಾವು ಈ ಕಡೆ ಕುಳಿತುಕೊಂಡು ಎದುರು ಪಕ್ಷದವರು ಹೇಳುವಂಥಾ ಮಾತುಗಳನ್ನು ಕೇಳುವಂಥಾ ಸನ್ನಿವೇಶ ಬಂದಿದೆ. ಆದರೆ ಇವತ್ತು ನಮ್ಮ ಸರ್ಕಾರ ಕಾರ್ಯದ ಬಗ್ಗೆ ಕಾರ್ಯೋನ್ಮುಖವಾಗಿದೆ, ನಮ್ಮ ವೈಫಲ್ಯತೆಯನ್ನು ನಿಮ್ಮ ಮುಂದೆ ಹೇಳವುದಕ್ಕೆ ನಾವು ಬಂದಿಲ್ಲ. ಈ ಸದನದಲ್ಲಿ ಚರ್ಚೆಯಾಗುವಾಗ ಕೆಲವರು ಹೊಸಬರು ಸ್ನೇಹಿತರು ಬಂದಿದ್ದಾರೆ, ಆದರೆ ಹಳಬರೂ ಸಹ ಈ ರೀತಿಯಾಗಿ ಕೋಪವನ್ನು ಪ್ರದರ್ಶನ ಮಾಡುವುದು ಬೇಡವೆಂದು ವಿನಂತಿ ಮಾಡಿ ಕೊಳ್ಳುತ್ತೇನೆ. ಆದುದರಿಂದ ನಾವು ಏನು ಹೇಳುತ್ತೇವೆಂಬುದನ್ನು ಮಾನ್ಯ ವಿರೋಧ ಪಕ್ಷದ ನಾಯಕ ರವರೂ ಸಹ ಸ್ವಲ್ಪ ಸಮಾಧಾನದಿಂದ ಕೇಳಬೇಕು.

ನೀವು ಮಾಡಿಲ್ಲವೆಂದಾಗಲೀ ಅಥವಾ ಕೇಂದ್ರ ಸರ್ಕಾರದ ಒಂದು ನೀತಿ ಏನಿದೆ ಅದು ಸರಿಯಿಲ್ಲ ಎಂಬ ವಾದವನ್ನು ಮುಂದಿಟ್ಟು ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸುವ ತನ್ನ ಕರ್ತವ್ಯದಲ್ಲಿ ರಾಜ್ಯ ಸರ್ಕಾರ ವಿಫಲವಾಗುವುದಕ್ಕೆ ಸಾಧ್ಯವಿಲ್ಲ. ನೀವು ಇಲ್ಲಿ ಕುಳಿತು ಕೆಲಸ ಮಾಡಿ ದಂತಹ ಅನುಭವ ಸಾಕಷ್ಟು ಇದೆ. ಆದರೂ ನೀವು ಒಂದು ಮಾತು ಹೇಳಿದಿರಿ, "ನೀವು ಬಳೆ ತೊಟ್ಟು ಕೊಂಡು ಹೋಗಬೇಕು" ಎಂದು.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಆ ರೀತಿ ಹೇಳಲಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ತಾವು ನಮ್ಮ ಸರ್ಕಾರದ ಬಗ್ಗೆ ಮತ್ತೊಂದು ಟೀಕೆಯ ಕಿಡಿ ಯನ್ನು ಈ ಸಭೆಯಲ್ಲಿ ಹಾರಿಸಿದ್ದನ್ನು ನಾನು ಕೇಳುತ್ತಾ ಕುಳಿತಿದ್ದೆ. ನಾವು ನಮ್ಮ ದೌರ್ಬಲ್ಯವನ್ನು ವ್ಯಕ್ತ ಮಾಡುವುದಕ್ಕೆ ಇನ್ನೂ ಸಿದ್ಧವಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಏನು ಕ್ರಮ ತೆಗೆದು ಕೊಂಡಿದ್ದೇವೆಂಬುದನ್ನು ಹೇಳುತ್ತಾರೆ. ಕುಡಿಯುವ ನೀರಿನ ಬಗ್ಗೆ ರಾಜ್ಯ ಸರ್ಕಾರ ತೆಗೆದುಕೊಂಡಿರುವ ನಿರ್ಣಯ ಏನು ಎಂಬುದನ್ನು ತಿಳಿಸಿ ಅದರ ಬಗ್ಗೆ ರಾಜ್ಯದ ಜನತೆಗೆ ಇರತಕ್ಕ ಸಂಕಷ್ಟವನ್ನು ಪರಿಹಾರ ಮಾಡುವ ಬಗ್ಗೆ ಸರ್ಕಾರದ ಸಾಧ್ಯತೆ ಏನು ಎಂಬುದನ್ನು ಅವರು ಹೇಳುವವರಿದ್ದಾರೆ. ಆದ್ದರಿಂದ, ಅದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿ ಸ್ವಲ್ಪ ಪಾತ್ರ ಬದಲಾಗಿದೆ. ಈ ಸನ್ನಿ ವೇಶದಲ್ಲಿ ಧರ್ಮಸಿಂಗ್‌ರವರು ಇಷ್ಟು ಆಕ್ರೋಶ ಮಾಡಿಕೊಳ್ಳುತ್ತಾರೆಂದು ತಿಳಿದುಕೊಂಡಿರಲಿಲ್ಲ. ಈ ಸಂದರ್ಭದಲ್ಲಿ ದಯುಮಾಡಿ ಎಲ್ಲರೂ ಸಮಾಧಾನದಿಂದ ಇರಬೇಕೆಂದು ವಿನಂತಿ ಮಾಡಿಕೊಂಡು ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರಿಸುತ್ತಾರೆಂದು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಆನೇಕಲ್‌ನ ನೀರಿನ ಅಭಾವಕ್ಕೂ ಹಳ್ಳಿಗಾಡಿನ ನೀರಿನ ಅಭಾವಕ್ಕೂ ಸಂಬಂಧವಿಲ್ಲ. ಅದು ಅನುಸಂಗಿಕವಾಗಿ ಬಂದಂತಹ ವಿಚಾರ ಆದರೂ ಮಹತ್ವದ ವಿಚಾರ. ಆದುದರಿಂದ, ಆ ಬಗ್ಗೆ ಸಂಬಂಧಪಟ್ಟ ಖಾತೆ ಮಂತ್ರಿಗಳು ಉತ್ತರಿಸಿದ್ದಾರೆ ಶ್ರೀಮತಿ ನಾಗರತ್ನಮ್ಮನವರಿಗೆ ಇಷ್ಟು ಮಾತ್ರ ಹೇಳಬಯಸುತ್ತೇನೆ. ನೀರಿನ ಅಭಾವ ಎಲ್ಲ ಕಡೆಗೂ ಇದೆ. ಎಲ್ಲಿ ಮಳೆಯಾಗಿಲ್ಲ ಅಲ್ಲಿ ತುಂಬ ತೀವ್ರವಾಗಿದೆ. ಮೊನ್ನೆತಾನೆ ಮಂತ್ರಿಮಂಡಲದ ಸಭೆಯಲ್ಲಿ ಯುದ್ಧದೋಪಾದಿಯಲ್ಲಿ ಈ ಒಂದು ಕೆಲಸವನ್ನು ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಿದ್ದೇವೆ. ಇದಕ್ಕಾಗಿ ೩ ಕೋಟಿ [illegible]೦ ಲಕ್ಷ ರೂಪಾಯಿಗಳನ್ನು ಹೊಸದಾಗಿ ಬಿಡುಗಡೆ ಮಾಡಿದ್ದೇವೆ. ಸಾಮಾನ್ಯ ವಾಗಿ ಕಪ್ಪು ಮಣ್ಣಿನ ಪ್ರದೇಶದಲ್ಲಿ ಕೊಳವೆ ಬಾವಿಗಳನ್ನು ಮಾಡಿದಾಗ ನೀರು ಬಾರದಿರುವ ಪ್ರಸಂಗ ಗಳು ಉಂಟು. ಅಂಥ ಕಡೆಗಳಲ್ಲಿ ಅಗತ್ಯ ಬಿದ್ದರೆ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರಿನ ಪೂರೈಕೆ ಮಾಡಬೇಕೆಂದು ಮಾಡಿದ್ದೇವೆ. ಎಲ್ಲಿ ದನಕರುಗಳಿಗೆ ಕುಡಿಯುವುದಕ್ಕೆ ನೀರಿಲ್ಲ ಅಂಥ ಕಡೆಗಳಲ್ಲಿ ಎಲ್ಲಾ ಬಾವಿಗಳನ್ನು ಮಾಡಬೇಕೆಂದು ಮಾಡಿದ್ದೇವೆ. ಇದಕ್ಕೆ ಸಂಬಂಧಪಟ್ಟ ಆಜ್ಞೆ ಈಗಾಗಲೇ ಎಲ್ಲ

ಜಿಲ್ಲಾಧಿಕಾರಿಗಳಿಗೂ ಹೋಗಿದೆ. ರಾಜಕಾರಣವನ್ನು ಇಲ್ಲಿ ತರಬೇಡಿ ಎಂದು ಕೆಲವರು ಹೇಳಿದರು. ನಾವು ರಾಜಕಾರಣವನ್ನು ಇಲ್ಲಿ ತರುವುದಿಲ್ಲ. ಮಾನ್ಯ ಚಿಕ್ಕೇಗೌಡರು ಕಳೆದ ೫ ವರ್ಷಗಳ ಅವಧಿಯಲ್ಲಿ ಇಲ್ಲಿ ಇರಲಿಲ್ಲ. ಆದರೂ ಅವರು ಏತಕ್ಕೆ ಹಾಗೆ ಮಾತನಾಡುತ್ತಾರೋ ಗೊತ್ತಿಲ್ಲ. ಈ ಸಂಧರ್ಭದಲ್ಲಿ ಮಾನ್ಯ ಮೊಯ್ಲಿಯವರನ್ನು ಒಂದು ಮಾತನ್ನು ಕೇಳಬೇಕಾಗಿದೆ; ಈ ಬರಗಾಲ ಪರಿಸ್ಥಿತಿ ತಕ್ಷಣ ಹುಟ್ಟಿತೋ ಅಥವಾ ಮೊದಲಿನಿಂತ ಇತ್ತೋ ಎಂದು. ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್ ತಿಂಗಳುಗಳಲ್ಲಿ ಸರಿಯಾಗಿ ಮಳೆ ಬರಲಿಲ್ಲ. ಕೆರೆಯಲ್ಲಿ ಇದ್ದ ನೀರೆಲ್ಲ ಈಗ ಆರಿ ಹೋಗಿದೆ. ಹಿಂದಿನ ಸರ್ಕಾರದವರು ಇದರ ಬಗ್ಗೆ ಒಂದು ಮೆಮೊರ್ಯಾಂಡಂ ಅನ್ನು ಕೂಡ ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಿಲ್ಲವೆಂಬ ಮಾತನ್ನು ಬಹಳ ದುಃಖದಿಂದ ಹೇಳುತ್ತೇನೆ. ಮೆಮೊರ್ಯಾಂಡಂ ಅನ್ನು ತಯಾರಿಸಿ ಕಳುಹಿಸಿದ್ದರೆ ಅವರಿಂದ ಈ ಕೆಲಸಕ್ಕೆ ಹಣ ಸಿಗುತ್ತಿತ್ತು. ಈ ಕೆಲಸವನ್ನು ನಾವು ಈಗ ಮಾಡಿದ್ದೇವೆ. ಮೆಮೋರ್ಯಾಂಡಂ ಅನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ಇವತ್ತು ಸಂಜೆ ಒಬ್ಬರು ವಿಶೇಷಾಧಿಕಾರಿಗಳನ್ನು ಕಳುಹಿಸುತ್ತಿದ್ದೇವೆ. ಈ ಕೆಲಸವನ್ನು ಹಿಂದಿನ ಸರ್ಕಾರದವರು ಏತಕ್ಕೆ ಮಾಡಲಿಲ್ಲವೆಂದು ಕೇಳುತ್ತೇನೆ. ಇದು ನಿರೀಕ್ಷೆ ಮಾಡುವಂತಹ ಕೆಲಸ ಅಲ್ಲವೆ ? ಮಳೆ ಎಲ್ಲೆಲ್ಲಿ ಬರಲಿಲ್ಲ ಅಥವಾ ಎಲ್ಲೆಲ್ಲಿ ಮಳೆಯ ಅಭಾವ ಇದೆ ಅಂಥ ಕಡೆಗಳಲ್ಲಿ ಇವತ್ತಲ್ಲ ನಾಳೆ ನೀರಿನ ತೊಂದರೆಯಾಗುತ್ತದೆ ಎಂಬುದನ್ನು ಆಡಳಿತಗಾರರು ಯೋಚಿಸಲಿಲ್ಲವೆಂದರೆ ಅದು ಜವಾಬ್ದಾರಿತನದ ಸರ್ಕಾರವೋ ಅಥವಾ ಯಾವ ತರಹದ ಸರ್ಕಾರ ಎಂಬುದನ್ನು ನಾನು ಹೇಳುವುದಿಲ್ಲ ; ತಾವು ಯೋಚಿಸಬೇಕು. ನೀರಿನ ಅಭಾವ ಯಾವುದೇ ವ್ಯಕ್ತಿಯ ಜೀವನಕ್ಕೆ ತೊಂದರೆಯಾಗುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ಇಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮುಖ್ಯ ಮಂತ್ರಿಗಳು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ವರ್ಕ್ ರಿಲೀಫ್ ಬಗ್ಗೆ, ಮಳೆ ಬಾರದೆ ನೀರಿನ ತೊಂದರೆಯಾಗಿರುವ ಬಗ್ಗೆ, ಕುಡಿಯುವ ನೀರಿನ ಬಗ್ಗೆ ಹಿಂದೆ ನಾವು ಮೆಮೊರ್ಯಾಂಡಂ ಅನ್ನು ಕೇಂದ್ರಕ್ಕೆ ಸಲ್ಲಿಸಿದ್ದೇವೆ. ಆ ಬಗ್ಗೆ ಸಂಬಂಧಪಟ್ಟ ಹಣಕಾಸಿನ ಮಂತ್ರಿಗಳನ್ನು ಸಹ ಭೇಟಿಯಾಗಿದ್ದೇವೆ. ಬಹುಶಃ ಅದು ನನಗನ್ನಿಸಿದ ಮಟ್ಟಿಗೆ ಹಣಕಾಸಿನ ಇಲಾಖೆಯವರು ಕಂದಾಯ ಇಲಾಖೆಯವರೊಡನೆ ಚರ್ಚೆ ಮಾಡಿದರೆ ಗೊತ್ತಾಗುತ್ತದೆ. ನಾವು ಕೇಂದ್ರಕ್ಕೆ ಸಲ್ಲಿಸಿರುವ ಮೆಮೊರ್ಯಾಂಡಂ ಕಾಪಿ ಕೂಡ ನನ್ನ ಕಡೆ ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ನೆನಪಿಲ್ಲದಿದ್ದರೆ ಇಲ್ಲವೆಂದು ಹೇಳಲಿ ; ಸುಮ್ಮನೆ ಅಸತ್ಯದ ಮಾತನ್ನಾಡುವುದು ಬೇಡ.

ಶ್ರೀಮಲ್ಲಿಕಾರ್ಜುನ ಖರ್ಗೆ.—ಮೆಮೊರ್ಯಾಂಡಂ ಅನ್ನು ಕೊಟ್ಟಿದ್ದೇವೆ. ತಮಗೆ ಬೇಕಾದರೆ ಅದರ ಒಂದು ಕಾಪಿಯನ್ನು ಕೊಡುತ್ತೇನೆ. ನಾವೇನಾದರೂ ಮೆಮೊರ್ಯಾಂಡಂ ಅನ್ನು ಸಲ್ಲಿಸಿಲ್ಲವೆಂಬುದು ರುಜುವಾತಾದರೆ ನಾನು ರಾಜೀನಾಮೆ ಕೊಡುತ್ತೇನೆ. ಕುಡಿಯುವ ನೀರಿನ ಬಗ್ಗೆ, ರೀಲಿಫ್ ವರ್ಕ್ಸ್ ಬಗ್ಗೆ ಹೀಗೆ ಎಲ್ಲದರ ಬಗ್ಗೆಯೂ ಸಮಗ್ರವಾಗಿ ಮೆಮೊರ್ಯಾಂಡಂ ಅನ್ನು ಕೊಟ್ಟಿದ್ದೇವೆ. ಇದರ ಬಗ್ಗೆ ತಮಗೆ (ಅಧ್ಯಕ್ಷರಿಗೆ) ಕೂಡ ಗೊತ್ತಿದೆ. ಅದು ಈ ಸದನದಲ್ಲೇ ಚರ್ಚೆಯಾಗಿದೆ. ಇಲ್ಲಿರತಕ್ಕ ಬಹುತೇಕ ಸದಸ್ಯರಿಗೆ ಅದು ಗೊತ್ತಿದೆ.

ಶ್ರೀರಾಮಕೃಷ್ಣ ಹೆಗಡೆ.—ಮಾನ್ಯ ಖಾರ್ಗೆಯವರು ಮೆಮೊರ್ಯಾಂಡಂ ಅನ್ನು ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಆದರೆ, ಮೊನ್ನೆಯವರೆಗೆ ಮಾನ್ಯ ಹಣಕಾಸಿನ ಸಚಿವರಾಗಿದ್ದ ಮೊಯ್ಲಿಯವರಿಗೆ ನೆನಪಿಲ್ಲ. ಬಹುಶಃ ಗುಪ್ತವಾಗಿ ಕಳುಹಿಸಿದ್ದರೆ ಗೊತ್ತಿರಲಿಕ್ಕಿಲ್ಲ.

ಶ್ರೀಎಂ. ವೀರಪ್ಪ ಮೊಯಿಲಿ.—ಅದನ್ನು ನಾನು ಸ್ಪಷ್ಟೀಕರಿಸಬಯಸುತ್ತೇನೆ. ಆ ಬಗ್ಗೆ ಈ ಸದನದಲ್ಲಿ ಕಳೆದ ೨–೩ ತಿಂಗಳ ಹಿಂದೆ ಚರ್ಚೆಯಾದದ್ದನ್ನು ತೆಗೆದು ನೋಡಿದರೆ ಗೊತ್ತಾಗುತ್ತದೆ. ಸದನದ ನಾಯಕರು ಮೆಮೊರ್ಯಾಂಡಂ ಅನ್ನು ಕೊಟ್ಟಿಲ್ಲವೆಂದು ಹೇಳಿದ್ದಾರೆ. ಆದರೆ ನನಗೆ ಗೊತ್ತಿದ್ದ ಹಾಗೆ ಕೊಟ್ಟಿದ್ದೇವೆ. ಆ ಬಗ್ಗೆ ಕೇಂದ್ರದ ಸಚಿವರೊಡನೆ ಸಹ ಮಾತುಕತೆ ನಡೆಸಿದ್ದೇವೆ. ದಯಮಾಡಿ, ಸದನದ ನಾಯಕರು ಹೇಳಿಕೆ ಕೊಡುವಾಗ ಸ್ವಲ್ಪ ವಿಚಾರ ಮಾಡಿಕೊಂಡು ಹೇಳಿಕೆ ಕೊಟ್ಟರೆ ಎಲ್ಲರಿಗೂ ಒಳ್ಳೆಯದಾಗುತ್ತದೆ.

ಶ್ರೀ ಎಂ. ರಘುಪತಿ.—೮೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಬಗ್ಗೆ ಸರ್ಕಾರಿ ಆಜ್ಞೆ ಮಾಡಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ನಾನು ಮಾಡಿದ್ದನ್ನು ಹೇಳಿದೆ, ಬೇರೆಯವರದ್ದು ನಾನು ಹೇಳಲಿಲ್ಲ.

ಅಧ್ಯಕ್ಷರು.—ಇಲ್ಲಿಗೆ ಆ ವಿಚಾರ ಮುಕ್ತಾಯವಾಯಿತು. ಈಗ ಮುಂದಿನ ವಿಷಯ.

(ಆ) ನಂಜನಗೂಡಿನ ದೇವರಸನ ಹಳ್ಳಿಯಲ್ಲಿ ನಡೆದ ಗುಂಪು ಘರ್ಷಣೆಯಲ್ಲಿ ನಾಲ್ಕು ಜನರು ಮೃತಪಟ್ಟಿರುವ ಬಗ್ಗೆ :—

ಶ್ರೀ ಕೆ. ಪಿ. ಶಾಂತಮೂರ್ತಿ (ಹಾನೂರು).—ಸನ್ಮಾನ್ಯ ಅಧ್ಯಕ್ಷರೇ, ೧೯೮೩ನೇ ಜನವರಿ ೯ ರಿಂದ ೧೧ ರವರೆಗೆ ನಂಜನಗೂಡು ತಾಲ್ಲೂಕಿನ ದೇವರಸನಹಳ್ಳಿಯಲ್ಲಿ ನಡೆದ ಗುಂಪು ಘರ್ಷಣೆಯಲ್ಲಿ ನಾಲ್ಕು ಜನರು ಮೃತಪಟ್ಟು ಹಾಗೂ ಹುಲ್ಲಿನ ಬಣವೆ ಸುಟ್ಟು ಹೋಗಿರುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ದೇವರಸನಹಳ್ಳಿಯಲ್ಲಿ ಒಂದು ವಿಷಾದಕರ ಘಟನೆ ನಡೆಯಿತು. ಇದಕ್ಕೂ ಒಂದು ಹಿನ್ನೆಲೆ ಇದೆ. ಇದು ಇದ್ದಕ್ಕಿದ್ದ ಹಾಗೆ ಅಕಸ್ಮಾತ್ ಆದ ಘಟನೆಯಲ್ಲ. ಎರಡು ಕೋಮುಗಳ ಮಧ್ಯದಲ್ಲಿ ಬಹಳ ಕಾಲದಿಂದ ಘರ್ಷಣೆ ಮತ್ತು ಒಂದು ತರಹದ ಟೆನ್‌ಷನ್ ನಡೆದುಕೊಂಡು ಬಂದಿತ್ತು ಆದರೆ ಈ ಸಲದ ಸಾರ್ವತ್ರಿಕ ಚುನಾವಣೆಯನಂತರ ಪರಿಸ್ಥಿತಿ ಸ್ವಲ್ಪಮಟ್ಟಿಗೆ ವಿಕೋಪಕ್ಕೆ ಹೋಯಿತು. ೯ನೇ ತಾರೀಖು ಅಂದರೆ ಹೊಸ ಸರ್ಕಾರ ಅಸ್ತಿತ್ವಕ್ಕೆ ಬರುವ ಮೊದಲು ಹರಿಜನ ವರ್ಗಕ್ಕೆ ಸೇರಿದ ಒಬ್ಬ ಸ್ಥಳೀಯ ವ್ಯಕ್ತಿಯ ಮೇಲೆ ಆಘಾತವಾಯಿತು. ಆತ ಆಸ್ಪತ್ರೆಯಲ್ಲಿ ನಂತರ ಪ್ರಾಣ ನೀಗಿದ. ಅದರ ಬಗ್ಗೆ ನಾನು ಹೇಳುವುದಕ್ಕಿಂತಲೂ ಇಂಥ ವಿಚಾರದಲ್ಲಿ ಸರ್ಕಾರದ ನೀತಿ ಏನು ಎಂಬ ಬಗ್ಗೆ ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ನಿನ್ನೆ ತಾನೇ ರಾಜ್ಯಪಾಲರ ಭಾಷಣದಲ್ಲಿ ನಮ್ಮ ಸರ್ಕಾರದ ನೀತಿನಿಯಮಗಳನ್ನು ಕೊಟ್ಟಿದ್ದೇವೆ. ನಮ್ಮ ರಾಜ್ಯದಲ್ಲಿ ಹರಿಜನರ ಮೇಲೆ ದುರ್ಬಲವರ್ಗದವರ ಮೇಲೆ ಎಲ್ಲೇ ಅತ್ಯಾಚಾರವಾಗಲಿ ಅದಕ್ಕೆ ಪ್ರಥಮ ಜವಾಬ್ದಾರಿ ಜಿಲ್ಲಾಧಿಕಾರಿಗಳು ಮತ್ತು ಪೋಲೀಸ್ ಸೂಪರಿಂಟೆಂಡೆಂಟ್‌ರವರು ಆಗುತ್ತಾರೆಂಬ ವಿಚಾರವನ್ನು ನಿನ್ನೆ ರಾಜ್ಯಪಾಲರ ಭಾಷಣದಲ್ಲಿ ಮಾನ್ಯ ಸದಸ್ಯರು ಕೇಳಿದ್ದಾರೆ. ಅಷ್ಟೇ ಅಲ್ಲದೆ ಅವರ ಕರ್ತವ್ಯ ದಕ್ಷತೆಯನ್ನು ಸಹ ಈ ದೃಷ್ಟಿಯಿಂದ ಅಳೆಯುತ್ತೇವೆ ಎಂಬ ಎಚ್ಚರಿಕೆಯನ್ನೂ ನಾವು ಅವರಿಗೆ ಕೊಟ್ಟಿದ್ದೇವೆ.ದೇವರಸನಹಳ್ಳಿಯಲ್ಲಿ ನಡೆದಂಥ ಘಟನೆಗೆ ಜವಾಬ್ದಾರರು ಯಾರು ಎಂದು ಹೇಳುವ ಬಗ್ಗೆ ನಾನಿಲ್ಲಿ ಚರ್ಚೆ ಮಾಡಲಿಕ್ಕೆ ಬಯಸುವುದಿಲ್ಲ.ಆದರೆ ಯಾವ ಕುಟುಂಬದಲ್ಲಿ ಕೊಲೆಯಾಯಿತೋ ಅಲ್ಲಿ ಪ್ರತಿಯೊಬ್ಬರಿಗೂ ತಲಾ ಎರಡು ಸಾವಿರ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದೇವೆ.ಹುಲ್ಲಿನ ಬಣವೆ ಬೆಂಕಿ ಪ್ರಕರಣದಲ್ಲಿ ಎರಡು ನೂರು ರೂಪಾಯಿಗಳಿಂದ ಐದು ನೂರು ರೂಪಾಯಿಗಳವರೆಗೆ ಪರಿಹಾರವನ್ನು ನಾವು ಕೊಟ್ಟಿದ್ದೇವೆ.ಗಾಯಗೊಂಡವರಿಗೆ ತಲಾ ೩೦೦ ರೂಪಾಯಿಗಳಂತೆ ಪರಿಹಾರವನ್ನು ನಾವು ಕೊಟ್ಟಿದ್ದೇವೆ. ಇಂಥ ಘಟನೆಗಳು ನಮ್ಮ ಇಡೀ ಸಮಾಜಕ್ಕೆ ಕಳಂಕ ತರತಕ್ಕ ಘಟನೆಗಳು. ಇದಕ್ಕೆ ಕಾರಣ ಸಾಮಾಜಿಕ, ಐತಿಹಾಸಿಕ, ಯಾವುದೇ ಕಾರಣ ಇರಬಹುದು. ಆದರೆ ಕಾರಣದ ಮರೆಯಲ್ಲಿ ನಾವು ನಮ್ಮ ಜವಾಬ್ದಾರಿಯನ್ನು ಕಳಚಿಕೊಳ್ಳಲು ಸಾಧ್ಯವಿಲ್ಲ. ಕಳೆದ ಮೂರು ವರ್ಷದ ಅವಧಿಯಲ್ಲಿ ನಮ್ಮ ರಾಜ್ಯದಲ್ಲಿ ಇಂಥ ದುರದೃಷ್ಟಕರ ಘಟನೆಗಳು ಬಹಳ ಆಗಿ ಹೋಗಿವೆ. ೧೯೭೯ರಲ್ಲಿ ಹರಿಜನರ ಕೊಲೆ ೧೩ ಆಗಿದ್ದರೆ ೧೯೮೦ರಲ್ಲಿ ೧೮ ಆಗಿವೆ, ೧೯೮೧ರಲ್ಲಿ ೩೧ ಆಗಿವೆ, ೧೯೮೨ರಲ್ಲಿ ೨೨ ಆಗಿವೆ. ಹರಿಜನರ ಮೇಲೆ ಹಿಂಸಾಚಾರ ಮತ್ತು ದೌರ್ಜನ್ಯಗಳು ೧೯೮೦ರಲ್ಲಿ ೧೦, ೧೯೮೧ರಲ್ಲಿ ೯, ೧೯೮೨ರಲ್ಲಿ ೬ ಆಗಿವೆ. ಮಹಿಳೆಯರ ಮೇಲೆ ಅತ್ಯಾಚಾರ ೧೯೮೦ರಲ್ಲಿ ೮, ೧೯೮೧ರಲ್ಲಿ ೭ ಮತ್ತು ೧೯೮೨ರಲ್ಲಿ ೭ ಆಗಿವೆ. ಮನೆಗಳಿಗೆ ಬೆಂಕಿ ಹಾಕಿದ ಪ್ರಕರಣಗಳು ೧೯೭೯ರಲ್ಲಿ ೧೪, ೧೯೮೦ರಲ್ಲಿ ೩೨, ೧೯೮೧ರಲ್ಲಿ ೫೧. ೧೯೮೨ರಲ್ಲಿ ೫೦ ಆಗಿವೆ. ಇನ್ನಿತರ ಐ.ಪಿ.ಸಿ ಪ್ರಕರಣಗಳು ೧೯೮೦ರಲ್ಲಿ ೩೭೭, ೧೯೮೧ರಲ್ಲಿ ೪೧೬, ೧೯೮೨ರಲ್ಲಿ ೩೪೯ ಆಗಿವೆ ನಾನು ಈ ಅಂಕಿ ಸಂಖ್ಯೆಗಳನ್ನು ಏತಕ್ಕೆ ಕೊಟ್ಟೆ ಎಂದರೆ ವರ್ಷದಿಂದ ವರ್ಷಕ್ಕೆ ಪ್ರಕರಣಗಳು ಕಡಿಮೆಯಾಗುವ ಬದಲು ಹೆಚ್ಚಾಗುತ್ತಿರುವ ದೃಷ್ಟಾಂತ ಕಂಡು ಬರುತ್ತಿದೆ. ಇದನ್ನು ನಾವು ತಡೆಗಟ್ಟಲೇಬೇಕು ಎನ್ನುವ ಉದ್ದೇಶದಿಂದ. ಇದನ್ನು ತಡೆಗಟ್ಟುವುದಕ್ಕೆ ಪೋಲೀಸರೇನಾದರೂ ಬಲಪ್ರಯೋಗ ಮಾಡತಕ್ಕ ಪ್ರಸಂಗ ಬಂದರೂ ಅದನ್ನು ಮಾಡಿ ತಡೆಗಟ್ಟುವುದಕ್ಕೆ ಪ್ರಯತ್ನಪಡಬೇಕು.